# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

'ನಿರ್ಮಾಣ ಭವನ', ಡಾ.ರಾಜ್‌ಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10.
ದೂರವಾಣಿ:080-23378375-80, ಇ-ಮೈಲ್:souharda@souharda.coop


ಸಂಖ್ಯೆ: ಸಂಸ/ಚುನಾವಣೆ/61/2016-17 ದಿನಾಂಕ:22.11.2016

## <u>ಚುನಾವಣಾ ವಿಷಯ</u>

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಗಮನಕ್ಕೆ

ಮಾನ್ಯರೇ,

**ವಿಷಯ : ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಚುನಾವಣೆ ಕುರಿತು.**

**ಉಲ್ಲೇಖ: ದಿನಾಂಕ 07.10.2016ರ ಮಾನ್ಯ ಚುನಾವಣಾಧಿಕಾರಿಗಳ ಅಧಿಕೃತ ಜ್ಞಾಪನ.**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಚುನಾವಣೆಯನ್ನು ದಿನಾಂಕ 27.11.2016ರಂದು ನಡೆಸಲು ಮಾನ್ಯ ಚುನಾವಣಾಧಿಕಾರಿಗಳು ನಿರ್ಣಯಿಸಿ, ದಿನಾಂಕ 07.10.2016ರಂದು ಮತದಾನದ ಹಕ್ಕುಳ್ಳ ಸಹಕಾರಿಗಳ, ಸುಸ್ತಿದಾರ ಸಹಕಾರಿಗಳ, ಮತದಾನದ ದಿನಾಂಕಕ್ಕೆ ಸುಸ್ತಿಯಾಗುವ ಸಹಕಾರಿಗಳ ಹಾಗೂ ಅನರ್ಹ ಸಹಕಾರಿಗಳ ಪಟ್ಟಿಗಳನ್ನು ಪ್ರಕಟಿಸಿದ್ದರು. ಈ ಕುರಿತು ಈಗಾಗಲೇ ದಿನಾಂಕ 08.10.2016ರಂದು ತಮಗೆ ಮಾಹಿತಿಯನ್ನು ಕಳುಹಿಸಲಾಗಿದೆ. ಹಾಗೂ ತಮ್ಮ ಸಹಕಾರಿಗೆ ಸಂಬಂಧಿಸಿದ ಡೆಲಿಗೇಟ್ ನಮೂನೆಗಳನ್ನು ದಿನಾಂಕ 18.10.2016ರಂದು ಕಳುಹಿಸಲಾಗಿದೆ.

ಸಹಕಾರಿಗಳಿಂದ ಭರ್ತಿಯಾಗಿ ಸಲ್ಲಿಕೆಯಾಗುವ ಡೆಲಿಗೇಟ್ ನಮೂನೆಗಳ ಜೊತೆಯಲ್ಲಿ ಆಡಳಿತ ಮಂಡಲಿ ನಿರ್ಣಯದ ಆದರೆ, ಎಲ್ಲಾ ಅರ್ಹ ಸಹಕಾರಿಗಳಿಂದ ಡೆಲಿಗೇಟ್ ನಮೂನೆಗಳು ಭರ್ತಿಯಾಗಿ ಸಲ್ಲಿಕೆಯಾಗಿಲ್ಲದ ಕಾರಣ ಹಾಗೂ ಸಲ್ಲಿಕೆಯಾಗಿರುವ ಡೆಲಿಗೇಟ್ ನಮೂನೆಗಳ ಪರಿಶೀಲನೆ ಮುಕ್ತಾಯವಾಗಿಲ್ಲದ ಹಿನ್ನೆಲೆಯಲ್ಲಿ ನಿಗದಿತ ಚುನಾವಣಾ ದಿನಾಂಕವಾದ 27.11.2016ಕ್ಕೆ 15 ದಿನ ಪೂರ್ವದಲ್ಲಿ ಅಂತಿಮ ಮತದಾರರ ಪಟ್ಟಿ ಪ್ರಕಟಿಸಲು ಸಾಧ್ಯವಾಗಿರುವುದಿಲ್ಲ. **ಆದ್ದರಿಂದ ಚುನಾವಣೆಯನ್ನು 27.11.2016ರಂದು ನಡೆಸಲು ಸಾಧ್ಯವಿರುವುದಿಲ್ಲ. ಚುನಾವಣಾ ದಿನಾಂಕ ಮರುನಿಗದಿಯಾದ ನಂತರ ತಮಗೆ ತಿಳಿಸಲಾಗುವುದು ಎಂದು ಈ ಮೂಲಕ ತಮ್ಮ ಗಮನಕ್ಕೆ ತರಲಾಗಿದೆ.**

ಸಹಿ/-
(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

Karnataka State Souharda Federal Cooperative Ltd.
Reg. No. RSR / SOU / ACT / 136 / Regn 051 / 2001-02 dated : 04-01-2002
Bangalore

* * * * *